ಸಂತೇಬಾಹಚಳ್ಳಿಯಂ ಶಾಲಾ ಮೈದಾನಗಳಿಗೆ ತಂತಿ ಬೇಲಿ ಹಾಕಿಸುವ ಬಗ್ಗೆ.

೧೩೧೧. ಶ್ರೀ ಕೃಷ್ಣ (ಕೃಷ್ಣರಾಜ ಪೇಟೆ).–ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣರಾಜ ಪೇಟೆ ತಾಲ್ಲೂಕು ಸಂತೇಬಾಚಹಳ್ಳಿಯ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆಯ ಆಟದ ಮೈದಾನಗಳು ವಿಶಾಲವಾಗಿದ್ದು ಅತಿಕ್ರಮಕ್ಕೆ ಒಳಗಾಗುವುದನ್ನು ತಡೆಯಲು ತಂತಿ ಬೇಲಿ ಹಾಕಿಸಿ ಕೊಡುವುದಾಗಿ ಮಾನ್ಯ ಶಿಕ್ಷಣ ಖಾತೆಯ ರಾಜ್ಯ ಸಚಿವರು ಈ ಹಿಂದೆ ಭರವಸೆ ಕೊಟ್ಟಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದುವರೆಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಇ) ಈಗಲಾದರೂ ಕೂಡಲೇ ಈ ಆಟದ ಮೈದಾನಗಳಿಗೆ ತಂತಿ ಬೇಲಿ ಹಾಕಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಸರ್ವೆ ಮಾಡಿ ಹದ್ದುಬಸ್ತು ನಿಗಧಿಪಡಿಸುವುದಕ್ಕೋಸ್ಕರವಾಗಿ ವಿಳಂಭವಾಯಿತು.

ಇ) ಸರ್ವೆ ಕೆಲಸ ಮುಗಿದು ಹದ್ದು ಬಸ್ತು ಕೆಲಸ ಮುಗಿದಿರುವುದರಿಂದ ಬೇಲಿ ಹಾಕಲು ಜಿಲ್ಲಾಧಿಕಾರಿಗಳನ್ನು ಕೋರಲಾಗುವುದು.

ಕೊಳ್ಳೇಗಾಲ ತಾಲ್ಲೂಕಿನ ನೀರಾವರಿ ಕಾಮಗಾರಿಗಳ ಬಗ್ಗೆ.

೭೮೫. ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆವಿಗೆ ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಯಾವ ಯಾವ ವರ್ಷ ಎಷ್ಟೆಷ್ಟು ಸಣ್ಣ, ಮಧ್ಯಮ, ನೀರಾವರಿ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

ಆ) ಗಿರಿಜನ ಉಪಯೋಜನೆ ಮತ್ತು ಗಂಗಾ ಕಲ್ಯಾಣ ಯೋಜನೆ ಮೇರೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆವಿಗೆ ಯಾವ ಯಾವ ನೀರಾವರಿ ಕಾಮಗಾರಿಗೆ ಮಂಜೂರಾತಿ ನೀಡಲಾಗಿದೆ.

ಇ) ಮೇಲ್ಕಂಡ ಎಲ್ಲಾ ಕಾಮಗಾರಿಗಳಿಂದ ಸರ್ಕಾರ ವೆಚ್ಚ ಮಾಡಿರುವ ಒಟ್ಟು ಹಣ ಎಷ್ಟು ಹಾಗೂ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಧ್ಯಮ ನೀರಾವರಿ ಯೋಜನೆ : ಯಾವುದೂ ಇಲ್ಲ.

ಸಣ್ಣ ನೀರಾವರಿ ಯೋಜನೆ :

೧೯೮೪–೮೫	೮ ಕೆಲಸಗಳು
೧೯೮೫–೮೬	೩೧ ಕೆಲಸಗಳು
೧೯೮೬–೮೭	೬೯ ಕೆಲಸಗಳು
ಒಟ್ಟು	೧೦೮ ಕೆಲಸಗಳು

ಆ)	ಗಂಗಾ ಕಲ್ಯಾಣ ಯೋಜನೆ	ಗಿರಿಜನ ಉಪಯೋಜನೆ
೧೯೮೪-೮೫	ಆರಬಗೆರೆ	ಜಡತಡೆಗಳ್ಳಕ್ಕೆ ಎತ್ತು ಅಣೆ ನಿರ್ಮಾಣ
೧೯೮೫-೮೬	—	—
೧೯೮೬-೮೭	ಚೊಮ್ಮನಗಡ್ಡೆ	

೪) ೨೫೩.೭೫೩ ಲಕ್ಷ ರೂಪಾಯಿಗಳು ೧೩೭೦ ಎಕರೆಗಳು

ಪಶ್ಚಿಮ ಘಟ್ಟಗಳಯೋಜನೆಗಳು.

೧೫೧೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಪಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳ ಯೋಜನೆ ಯಾವ ಯಾವ ತಾಲ್ಲೂಕುಗಳಲ್ಲಿ ಕೈಗೊಳ್ಳಲಾಗಿದೆ;

ಆ) ಹೊಸನಗರ ತಾಲ್ಲೂಕಿನ ಘಟ್ಟ ಪ್ರದೇಶದಲ್ಲಿರುವ ನಗರ ಹೋಬಳಿ, ಈ ಯೋಜನೆಯಲ್ಲಿ ಸೇರದಿರಲು ಕಾರಣವೇನು ?

ಇ) ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ, ಸಾಗರ, ಹೊಸನಗರ, ತೀರ್ಥಹಳ್ಳಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಪಶ್ಚಿಮ ಘಟ್ಟಗಳ ಯೋಜನೆಯನ್ನು ಕೈಗೊಳ್ಳಲಾಗಿದೆ.

ಆ) ಹೊಸ ನಗರ ತಾಲ್ಲೂಕು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಲ್ಲಿ ಸೇರಿರುವುದರಿಂದ ಆ ತಾಲ್ಲೂಕಿನ ಎಲ್ಲಾ ಹೋಬಳಿಗಳು ಸೇರಿರುತ್ತವೆ.

ಇ) ೧೯೮೪-೮೫ ಮತ್ತು ೮೫-೮೬ ರಲ್ಲಿ ಖರ್ಚಾದ ಹಣ ಈ ರೀತಿ ಇದೆ.

ಶಿವಮೊಗ್ಗ	...	೩೦.೬೨ ಲಕ್ಷ
ಸಾಗರ	...	೩೪.೩೫
ಹೊಸನಗರ	...	೨೩.೦೧
ತೀರ್ಥಹಳ್ಳಿ	...	೧೬.೨೦
ಶಿಕಾರಿಪುರ	...	೨೨.೮೬

ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣ ಮಾಡುವುದು.

೧೫೧೦. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅನುದಾನ ಪಡೆಯುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು ?

ಆ) ಅನುದಾನ ಪಡೆಯದಿರುವ ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು ? (ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು)

ಇ) ಅನುದಾನವನ್ನು ಪಡೆಯುತ್ತಿರುವ ಶಾಲೆಗಳ ಖರ್ಚನ್ನು ಸರ್ಕಾರದವರು ಕೊಡುತ್ತಿರುವ ಅನುದಾನದ ಶೇಕಡಾ ಪ್ರಮಾಣವೆಷ್ಟು ?